(12)

ಜರೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂ:ಆಯುಕ್ತರು/ಪಿ.ಆರ್/44/13-14
CE(RR)

ಆಯುಕ್ತರ ಕಛೇರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್.ಚೌಕ,ಬೆಂಗಳೂರು-02
ದಿನಾಂಕ: 11.06.2013

ಸುತ್ತೋಲೆ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಆರ್ಟೀರಿಯಲ್ ಮತ್ತು ಸಬ್‌ಆರ್ಟೀರಿಯಲ್ ರಸ್ತೆಗಳಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇತ್ತೀಚಿಗೆ ಬೆಂಗಳೂರು ನಗರದಲ್ಲಿ ಬಿದ್ದ ಭಾರಿ ಮಳೆಯಿಂದ, ಕೆಲವು ಪ್ರಮುಖ ರಸ್ತೆಗಳು ಹಾಳಾಗಿ ಗುಂಡಿಗಳು ಉಂಟಾಗಿರುವುದು ಕಂಡು ಬಂದಿರುತ್ತದೆ. ಇದರಿಂದ ವಾಹನಗಳ ಸಂಚಾರಕ್ಕೆ ತೀರ್ವ ತೊಂದರೆ ಉಂಟಾಗಿತ್ತಿದ್ದು, ಇದರಿಂದ ದಿನನಿತ್ಯ ಸಾರ್ವಜನಿಕರಿಂದ ಹಾಗೂ ಮಾಧ್ಯಮಗಳಿಂದ ತೀರ್ವ ಟೀಕೆಗೆ ಗುರಿಯಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ, ದಿನಾಂಕ:10.06.2013 ರಂದು ಕರೆದ ಮುಖ್ಯ ಅಭಿಯಂತರರುಗಳು /ಅಧಿಕಾರಿಗಳ ಸಭೆಯಲ್ಲಿ ಸೂಚಿಸಿದಂತೆ ಆರ್ಟೀರಿಯಲ್ ಮತ್ತು ಸಬ್‌ಆರ್ಟೀರಿಯಲ್ ರಸ್ತೆಗಳಲ್ಲಿ ಉಂಟಾಗಿರುವ ರಸ್ತೆಗುಂಡಿಗಳನ್ನು ಮುಚ್ಚಲು ತಕ್ಷಣವೆ ಆಯಾ ವಲಯದ ಮುಖ್ಯ ಅಭಿಯಂತರರು ಕ್ರಮ ತೆಗೆದುಕೊಳ್ಳುವುದು. ಪ್ರತಿ ವಾರ್ಡ್‌ಗೆ ಆರ್ಟೀರಿಯಲ್ ಮತ್ತು ಸಬ್‌ಆರ್ಟೀರಿಯಲ್ ರಸ್ತೆಗಳಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಲು ರೂ. 5.00 ಲಕ್ಷಗಳ ಅನುದಾನ ಹಂಚಿಕೆ ಮಾಡಲಾಗಿರುತ್ತದೆ. ಸದರಿ ವೆಚ್ಚವನ್ನು ಪಾಲಿಕೆಯ ಆಯವ್ಯಯದ ಲೆಕ್ಕಶೀರ್ಷಿಕೆ ಆರ್ಟೀರಿಯಲ್ ಮತ್ತು ಸಬ್‌ಆರ್ಟೀರಿಯಲ್ ರಸ್ತೆಗಳ ನಿರ್ವಹಣೆಯ ಅನುದಾನದಲ್ಲಿ ಭರಿಸಲು ಸೂಚಿಸಿದೆ.

ಅದರಂತೆ ತುರ್ತಾಗಿ ಕ್ರಮ ತೆಗೆದುಕೊಳ್ಳಲು ಕೆ.ಆರ್.ಐ.ಡಿ.ಸಿ.ಎಲ್ ಮುಖಾಂತರ ಕಾಮಗಾರಿ ನಿರ್ವಹಿಸುವುದು. ಈಗಾಗಲೇ Defect Liability Period/Maintenance Period ಇರುವ ರಸ್ತೆಗಳನ್ನು ಗುರುತಿಸಿ, ಸದರಿ ರಸ್ತೆ ಗುಂಡಿಗಳ ಕಾಮಗಾರಿಗೆ ಅಂದಾಜು ತಯಾರಿಸುವುದು, ಸದರಿ ರಸ್ತೆ ಗುಂಡಿ ಮುಚ್ಚುವ ಕಾರ್ಯವನ್ನು 15 ದಿನಗಳ ಅವಧಿಯೊಳಗೆ ಪೂರ್ಣಗೊಳಿಸುವುದು ತಪ್ಪಿದಲ್ಲಿ ಸಂಬಂಧಪಟ್ಟ ಸಹಾಯಕ ಅಭಿಯಂತರರು/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರನ್ನು ನೇರ ಜವಾಬ್ದಾರಿಗಾರರನ್ನಾಗಿ ಮಾಡಿ ಶಿಸ್ತುಕ್ರಮ ಜರುಗಿಸಲಾಗುವುದು. ಪ್ರತಿ ನಿತ್ಯ ರಸ್ತೆ ಗುಂಡಿ ಮುಚ್ಚುವ ಪ್ರಗತಿ ವಿವರವನ್ನು ಆಯಾ ವಲಯದ ಮುಖ್ಯ ಅಭಿಯಂತರು ಆಯುಕ್ತರವರ ಕಛೇರಿಯ ಆಪ್ತ ಶಾಖೆಗೆ ನೀಡಲು ಸೂಚಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

14 JUN 2013
595

ಎಲ್ಲ EE's/AEE's ರವರ ಗಮನಕ್ಕೆ ಹಾಗು ನಿಕಟ ಕಾರ್ಯಕ್ಕೆ. ಕಟ್ಟುನಿಟ್ಟಾಗಿ ಪಾಲಿಸಿ ನಿಲುವಿನ ಬಗ್ಗೆ ವರದಿ ಸಲ್ಲಿಸಲು ಕೋರಿದೆ. 14/6/13

(4)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಪ್ರಅ/ಪಿಆರ್/3891/13-14

ಪ್ರಧಾನ ಅಭಿಯಂತರರು ರವರ ಕಛೇರಿ
ಮಹಾನಗರ ಪಾಲಿಕೆ ಕಛೇರಿಗಳು
ಎನ್.ಆರ್.ಚೌಕ, ಬೆಂಗಳೂರು-02
ದಿನಾಂಕ 24-07-2013

ಸುತ್ತೋಲೆ

ವಿಷಯ: ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸುವ ಕಾಮಗಾರಿಗಳಿಗೆ ಮಾತ್ರ ಸೇವಾ ಹಾಗೂ ಲೇಬರ್ ಸೆಸ್ ವೆಚ್ಚವನ್ನು ಅಂದಾಜುಪಟ್ಟಿಯಲ್ಲಿ ಸೇರಿಸಿಕೊಳ್ಳುವ ಬಗ್ಗೆ.

DM, ಮಿಲ್ಲಿ AEE's ಕಳಿಸಿ ಸುತ್ತೋಲೆ ಕಳುಹಿಸಿಕೊಡಿ 31/7/13

ಉಲ್ಲೇಖ: ವಿಶೇಷ ಆಯುಕ್ತರು (ಯೋಜನೆ) ರವರ ಸುತ್ತೋಲೆ ಸಂ: ವಿ.ಆ(ಯೋ)/ಪಿಆರ್/2807/13-14.
ದಿನಾಂಕ: 22-07-2013

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ತುರ್ತು ಪರಿಸ್ಥಿತಿಯಲ್ಲಿ ನಿರ್ವಹಿಸಬೇಕಾದ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖೇನಾ ಕೈಗೊಳ್ಳಲಾಗುತ್ತಿರುವುದ ಸರಿಯಷ್ಟೇ, ಕೆ.ಆರ್.ಐ.ಡಿ,ಎಲ್ ಸಂಸ್ಥೆಗೆ ಇಂತಹ ಪರಿಸ್ಥಿತಿಗಳಲ್ಲಿ ಕಾಮಗಾರಿಗಳನ್ನು ವಹಿಸುವ ಸಂದರ್ಭಗಳಲ್ಲಿ ಸದರಿ ಕಾಮಗಾರಿಗಳ ಅಂದಾಜುಪಟ್ಟಿಯಲ್ಲಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ನೀಡಲಾಗುತ್ತಿರುವ ಶೇ. 10% ಸೇವಾ ಶುಲ್ಕದ ಮೊತ್ತವನ್ನು ಹಾಗೂ ಶೇ. 1% ರಷ್ಟು ಲೇಬರ್‌ಸೆಸ್ ಶುಲ್ಕದ ಮೊತ್ತವನ್ನು ಅಂದಾಜುಪಟ್ಟಿಯಲ್ಲಿ ಸೇರಿಸಿಕೊಳ್ಳುವುದು ಅವಶ್ಯಕವಾಗಿರುತ್ತದೆ ಎಂದು ಮೇಲ್ಕಂಡ ಉಲ್ಲೇಖದ ಅಡಿಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರು ಆದೇಶಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮುಂದಿನ ದಿನಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖೇನಾ ಕೈಗೊಳ್ಳಬೇಕಾದ ಕಾಮಗಾರಿಗಳಿಗೆ ಸಂಬಂಧಪಟ್ಟ ಅಂದಾಜು ಪಟ್ಟಿಗಳಲ್ಲಿ ಮೇಲ್ಕಂಡ ಸೆಸ್‌ಗಳ ಮೊತ್ತವನ್ನು ಕಡ್ಡಾಯವಾಗಿ ಅಂದಾಜುಪಟ್ಟಿಯಲ್ಲಿ ಕೋರಿಸ ತಕ್ಕದೆಂದು ಈ ಮೂಲಕ ಆದೇಶಿಸಲಾಗಿದೆ.

ಸಂಖ್ಯೆ: 1008
ದಿನಾಂಕ: 30.7.13

24/07/13
ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಮಾನ್ಯ ಆಯುಕ್ತರು /ವಿಶೇಷ ಆಯುಕ್ತರು (ಯೋಜನೆ) ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಎಲ್ಲಾ ಪಾಲಿಕೆ ಮುಖ್ಯ ಅಭಿಯಂತರರು ರವರಿಗೆ ಸಲ್ಲಿಸುತ್ತಾ, ಸುತ್ತೋಲೆಯಲ್ಲಿ ನೀಡಿರುವ ಆದೇಶವನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.
3. ಕಛೇರಿ ಪ್ರತಿ

26 JUL 2013
1294

Yelahanka

2139
25/7/13

ಎಲ್ಲಾ EE's ಗಳಿಗೆ
ಸೂಕ್ತ ಕ್ರಮಕ್ಕಾಗಿ
26/07/13